4655 (5397) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ) :- ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಮೂಲಭೂತ ಸೌಲಭ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಮತ್ತು ರೋಗಗ್ರಸ್ಥವಾಗಿರುವ ಕೈಗಾರಿಕೆಗಳ ಒಟ್ಟು ಸಂಖ್ಯೆ ಎಷ್ಟು (ಜಿಲ್ಲಾವಾರು ಸಂಖ್ಯೆ ನೀಡುವುದು);

ಆ) ರೋಗಗ್ರಸ್ಥ ಕೈಗಾರಿಕೆಗಳ ಪುನಃಶ್ಚೇತನಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು; ಹಿಂದುಳಿದ ಜಿಲ್ಲೆಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗಾಗಿ ಸರ್ಕಾರ ಕೈಗೊಂಡ ಪ್ರೋತ್ಸಾಹಕ ಕ್ರಮಗಳೇನು;

ಇ) ಕೆಐಎಡಿಬಿ ವತಿಯಿಂದ ಕೈಗಾರಿಕಾ ಉದ್ದೇಶಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ (ವಿಸ್ತೀರ್ಣದೊಂದಿಗೆ ಜಿಲ್ಲಾವಾರು ವಿವರ ನೀಡುವುದು); ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿ ಎಷ್ಟು ವಿಸ್ತೀರ್ಣದ ಜಮೀನು ಹಂಚಿಕೆಯಾಗದೆ ಉಳಿದಿದೆ;

ಈ) ರಾಜ್ಯದ ಗಡಿಪ್ರದೇಶಗಳಲ್ಲಿ ಹಾಗೂ ಹಿಂದುಳಿದ ಜಿಲ್ಲೆಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಸರ್ವೆ ಕಾರ್ಯವನ್ನು ಕೈಗೊಂಡಿದೆಯೇ; ಕೈಗೊಂಡಿದ್ದಲ್ಲಿ ವಿವರಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಮೂಲಭೂತ ಸೌಲಭ್ಯ ಸಚಿವರು) :

ಅ) ದಿ : 31-5-2005ರ ಅಂತ್ಯಕ್ಕೆ ರಾಜ್ಯದಲ್ಲಿ 3,22,667 ಸಣ್ಣ ಕೈಗಾರಿಕೆಗಳು ನೊಂದಣಿಯಾಗಿರುತ್ತವೆ. ರಾಜ್ಯದಲ್ಲಿ ದಿ : 30-6-2005ರಲ್ಲಿದ್ದಂತೆ 520 ಘಟಕಗಳನ್ನು ರೋಗಗ್ರಸ್ಥವೆಂದು ಘೋಷಿಸಲಾಗಿದೆ. ಜಿಲ್ಲಾವಾರು ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ರೋಗಗ್ರಸ್ಥ ಕೈಗಾರಿಕೆಗಳ ಪ್ರವರ್ತಕರು ತಮ್ಮ ಘಟಕಗಳ ಪುನಃಶ್ಚೇತನದ ಬಗ್ಗೆ ಆಸಕ್ತಿ ವಹಿಸಿ ಸೂಕ್ತ ಯೋಜನಾ ವರದಿಯನ್ನು (Viable project) ನ್ನು ಸಂಬಂಧಪಟ್ಟ ಹಣಕಾಸು ಸಂಸ್ಥೆಗೆ ಸಲ್ಲಿಸಬೇಕಾಗುತ್ತದೆ.

ರೋಗಗ್ರಸ್ಥ ಕೈಗಾರಿಕೆಗಳ ಪುನಃಶ್ಚೇತನ ಕಾರ್ಯಕ್ರಮದಲ್ಲಿ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳ ಪಾತ್ರವು ಅತಿ ಮುಖ್ಯ ಮತ್ತು ಮಹತ್ವದ್ದಾಗಿರುತ್ತದೆ. ಇಂತಹ ಘಟಕಗಳು ರೋಗಗ್ರಸ್ಥತೆಯಿಂದ ಹೊರಬರುವ ಸಾಧ್ಯತೆ ಅಂದರೆ Viability ಯನ್ನು ಸ್ವತಂತ್ರವಾಗಿ ಬ್ಯಾಂಕುಗಳು ನಿರ್ಧರಿಸುತ್ತದೆ. ಇದರಲ್ಲಿ ಇಲಾಖೆಯಾಗಲೀ ಅಥವಾ

ರಾಜ್ಯ ಸರ್ಕಾರವಾಗಲೀ ಯಾವುದೇ ಪಾತ್ರ ವಹಿಸುವಂತಿರುವುದಿಲ್ಲ. ರೋಗಗ್ರಸ್ಥ ಸಣ್ಣ ಕೈಗಾರಿಕಾ ಘಟಕಗಳ ಪ್ರವರ್ತಕರು ಇವುಗಳ ಪುನಃಶ್ಚೇತನದ ಬಗ್ಗೆ ಆಸಕ್ತರಾಗಿದ್ದಲ್ಲಿ ಅರ್ಹ ಪ್ರಸ್ತಾವನೆಗಳನ್ನು (Viable proposals) ಬ್ಯಾಂಕುಗಳಿಗೆ ಸಲ್ಲಿಸಬೇಕಾಗುತ್ತದೆ. ಇವುಗಳನ್ನು ಪರಿಶೀಲಿಸಿ ಪ್ರಸ್ತಾವನೆಗಳ ಅರ್ಹತೆ ಬಗ್ಗೆ ಬ್ಯಾಂಕುಗಳು ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಅಂತಹ ಘಟಕಗಳ ಪುನಃಶ್ಚೇತನದ ಬಗ್ಗೆ ಹಾಗೂ ಅವುಗಳಿಗೆ ಯಾವ ಯಾವ ರಿಯಾಯಿತಿಗಳು ಅರ್ಹವಿದೆ ಎಂಬುದನ್ನು ಹಣಕಾಸು ಸಂಸ್ಥೆಗಳು appraisal report ನಲ್ಲಿ ಅಳವಡಿಸುತ್ತಾರೆ.

ರೋಗಗ್ರಸ್ಥ ಕೈಗಾರಿಕೆಗಳ ಪುನಃಶ್ಚೇತನಕ್ಕಾಗಿ ಪ್ರತ್ಯೇಕ ರೋಗಗ್ರಸ್ಥ ಪುನಃಶ್ಚೇತನ ಕೈಗಾರಿಕಾ ನೀತಿಯಂತೆ ಸರ್ಕಾರದ ಆದೇಶ ಸಂಖ್ಯೆ : ಸಿಐ 167 ಎಸ್‌ಪಿಐ 2001, ದಿ : 25–9–2002 ರಂತೆ ಪುನಃಶ್ಚೇತನಗೊಂಡ ರೋಗಗ್ರಸ್ಥ ಕೈಗಾರಿಕೆಗಳಿಗೆ ಈ ಕೆಳಕಂಡ ರಿಯಾಯ್ತಿಗಳನ್ನು ನೀಡಲಾಗುತ್ತದೆ.

1. ಘಟಕದ ಪುನಃಶ್ಚೇತನಾ ಯೋಜನಾ ವೆಚ್ಚದ ಶೇ.25ರಷ್ಟು ಹಣವನ್ನು ರೂ.2.50 ಲಕ್ಷಗಳನ್ನು ಮಿತಿಗೊಳಪಟ್ಟು ಬಡ್ಡಿರಹಿತ ಬೀಜಧನ ಸಾಲದ ರೂಪದಲ್ಲಿ ನೀಡಲಾಗುತ್ತದೆ.

2. ಕೆ.ಪಿ.ಟಿ.ಸಿ.ಎಲ್. ಹಾಗೂ ಇತರ ಪ್ರಾಂತೀಯ ವಿದ್ಯುತ್ ಸರಬರಾಜು ಕಂಪನಿಗಳು ಘಟಕವು ಮುಚ್ಚಿದ ಅವಧಿಯಲ್ಲಿ ನಿಗಧಿತ ದರ ಹಾಗೂ ಬೇಡಿಕೆ ದರ ಪಾವತಿಯಿಂದ ವಿನಾಯಿತಿ ನೀಡುವುದು.

3. ವಿದ್ಯುತ್ ಬಾಕಿ ದರಗಳನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಶೇ.6ರ ಬಡ್ಡಿ ದರದಲ್ಲಿ ಪಾವತಿಸಲು ಅವಕಾಶ.

4. ಘಟಕವು ಮುಚ್ಚಿದ ಅವಧಿಗೆ ಬಡ್ಡಿ ಪಾವತಿಯಿಂದ ವಿನಾಯಿತಿ.

5. ಕೆಐಎಡಿಬಿ : ಕೆಎಸ್‌ಎಸ್‌ಐಡಿಸಿ : ಕಿಯೋನಿಕ್ಸ್‌ಗಳ ಬಾಕಿ ಸಾಲ ಪಾವತಿಯನ್ನು ಒಂದು ವರ್ಷಗಳವರೆಗೆ ಮುಂದೂಡಿ ಅದನ್ನು ನಾಲ್ಕು ವಾರ್ಷಿಕ ಕಂತುಗಳಲ್ಲಿ ಪಾವತಿಸಲು ಅವಕಾಶ.

6. ಅಭಿವೃದ್ಧಿ ಸಾಲ ಮರು ಪಾವತಿಯನ್ನು ಕೈಗಾರಿಕೆಯು ಪುನಃಶ್ಚೇತನಗೊಳಿಸಿದ ನಂತರ ಮೂರು ವರ್ಷದ ಅವಧಿಯಲ್ಲಿ ಬಡ್ಡಿ ಇಲ್ಲದೆ ಪಾವತಿಸಲು ಅವಕಾಶ.

7. ವಾಣಿಜ್ಯ ತೆರಿಗೆ ಬಾಕಿಯನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಶೇ.6ರ ಬಡ್ಡಿ ದರದಲ್ಲಿ ಮರುಪಾವತಿಸಲು ಅವಕಾಶ.

8. ಘಟಕವು ಪುನಃಶ್ಚೇತನಗೊಂಡ ನಂತರ ಮುಂದೆ ಪಾವತಿಸಬೇಕಾದ ವಾಣಿಜ್ಯ ತೆರಿಗೆಯನ್ನು ಬಡ್ಡಿ ಇಲ್ಲದೇ ಮೂರು ವರ್ಷಗಳವರೆಗೆ ಮುಂದೂಡಲು ಅವಕಾಶ ಹಾಗೂ ಈ ಮೊತ್ತವನ್ನು ಮೂರು ವಾರ್ಷಿಕ ಕಂತುಗಳಲ್ಲಿ ಪ್ರಸ್ತುತ ತೆರಿಗೆಯೊಡನೆ ಪಾವತಿಸಲು ಅವಕಾಶ.

ಭಾರಿ ಮತ್ತು ಮಧ್ಯಮ ರೋಗಗ್ರಸ್ಥ ಕೈಗಾರಿಕೆಗಳ ಪುನಃಶ್ಚೇತನ ಕಾರ್ಯಕ್ರಮದಡಿ ಸವಲತ್ತುಗಳನ್ನು ಪಡೆಯಲು BIFR ಗೆ ಅರ್ಜಿ ಸಲ್ಲಿಸಬೇಕಾಗುತ್ತದೆ.

ಹಿಂದುಳಿದ ಜಿಲ್ಲೆಗಳಲ್ಲಿ ಕೈಗಾರಿಕಾ ಸ್ಥಾಪನೆಗಾಗಿ 2005–06ನೇ ಸಾಲಿನಲ್ಲಿ ಕೈಗಾರಿಕಾ ವಿಕಾಸ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು. ಪ್ರಾದೇಶಿಕ ಅಸಮಾನತೆಯನ್ನು ಸರಿಪಡಿಸುವ ಬಗ್ಗೆ ಡಾ॥ ಡಿ.ಎಂ. ನಂಜುಂಡಪ್ಪ ಅಧ್ಯಯನ ಸಮಿತಿ ವರದಿಯಂತೆ ಗುರುತಿಸಲಾಗಿರುವ ರಾಜ್ಯದ ವಿವಿಧ ಜಿಲ್ಲೆಗಳ 39 ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಕೈಗಾರಿಕಾ ಬೆಳವಣಿಗೆ ಸಾಧಿಸಲು ಈಗಾಗಲೇ ಟೆಕ್ಸಾಕ್ ಸಂಸ್ಥೆಯು ಕ್ರಿಯಾ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯನ್ವಯ ಕಾರ್ಯಗತಗೊಳಿಸಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮಿತಿಯನ್ನು ರಚಿಸಲಾಗಿದೆ ಹಾಗೂ ರಾಜ್ಯ ಮಟ್ಟದಲ್ಲಿ ಮಾನ್ಯ ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳು ಹಾಗೂ ಮೂಲಭೂತ ಸೌಕರ್ಯ ಸಚಿವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. 2005–06ನೇ ಸಾಲಿನಲ್ಲಿ ಈ ಯೋಜನೆಗೆ ರೂ.25.00 ಕೋಟಿ ಅನುದಾನ ಒದಗಿಸಲಾಗಿದೆ. ಇದಲ್ಲದೆ ಕೈಗಾರಿಕಾ ನೀತಿ 2001–06ರ ಪ್ರಕಾರ ಸಿ ವಲಯದಲ್ಲಿ (ಹಿಂದುಳಿದ ಪ್ರದೇಶ) ಸ್ಥಾಪಿಸಲ್ಪಡುವ ಹೊಸ ಅತಿ ಸಣ್ಣ ಕೈಗಾರಿಕೆಗಳು ಹೂಡುವ ಸ್ಥಿರ ಬಂಡವಾಳದ ಮೇಲೆ ಶೇ.20ರಷ್ಟು ಸಹಾಯಧನವನ್ನು ಗರಿಷ್ಠ ಮಿತಿ ರೂ.10.00 ಲಕ್ಷಕ್ಕೊಳಪಟ್ಟು ಹಾಗೂ ಡಿ ವಲಯದಲ್ಲಿ (ಅತ್ಯಂತ ಹಿಂದುಳಿದ) ಸ್ಥಾಪಿಸಲ್ಪಡುವ ಹೊಸ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳು ಹೂಡುವ ಸ್ಥಿರ ಬಂಡವಾಳದ ಮೇಲೆ ಶೇ.25ರಷ್ಟು ಸಹಾಯಧನವನ್ನು ಗರಿಷ್ಠ, ಮಿತಿ ರೂ.12.50 ಲಕ್ಷಕ್ಕೊಳಪಟ್ಟು ಸಹಾಯಧನವನ್ನು ನೀಡಲಾಗುತ್ತದೆ.

ಇ) ಕೆಐಎಡಿಬಿ ವತಿಯಿಂದ ಕೈಗಾರಿಕಾ ಉದ್ದೇಶಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ ಸ್ವಾಧೀನಪಡಿಸಿಕೊಂಡ ಜಮೀನಿನ ವಿಸ್ತೀರ್ಣದ ಜಿಲ್ಲಾವಾರು ವಿವರಗಳನ್ನು ಹಾಗೂ ಸ್ವಾಧೀನಪಡಿಸಿಕೊಂಡ ಜಮೀನುಗಳಲ್ಲಿ ಹಂಚಿಕೆಯಾಗದೆ ಉಳಿದಿರುವ ಜಮೀನಿನ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ವಿಧಾನ ಸಭೆ ಪ್ರಶ್ನೆ ಸಂಖ್ಯೆ : 5397ಕ್ಕೆ ಅನುಬಂಧ

ದಿನಾಂಕ 30.6.2005ರ ಅಂತ್ಯಕ್ಕೆ ರಾಜ್ಯದಲ್ಲಿ ರೋಗಗ್ರಸ್ಥವೆಂದು ಘೋಷಿಸಿರುವ ಘಟಕಗಳ ಜಿಲ್ಲಾವಾರು ವಿವರ :

Sl.No.	Name of the District	No.of Units declared as Sick
1	Bangalore (U)	42
2	Bangalore (R)	30
3	Belguam	1
4	Bellary	5
5	Bidar	9
6	Bijapur	17
7	C.Magalur	-
8	C.Durga	62
9	Mangalur	1
10	Dharwad	03
11	Gulbarga	102
12	Hassan	10
13	Kodagu	-
14	Kolar	24
15	Mandya	32
16	Mysore	21
17	Raichur	23
18	Shimoga	46
19	Tumkur	23
20	Karwar	14
21	Bagalkot	1

22	C.nagar	2
23	D'gere	-
24	Gadag	14
25	Haveri	5
26	Koppal	23
27	Udupi	10
	Total	**520**

Enclosure to LA Q No. 5397

District - wise Details of Small Scale Industries Registered in the State as on 31.05.2005

Sl.No.	District	No.of Units	Investment	Employment
1	B'lore (U)	50416	167034	417917
2	B'lore (R)	21287	44363	146830
3	Belgaum	27310	47136	114886
4	Bellary	12439	28272	57308
5	Bidar	7316	12889	39985
6	Bijapur	6235	10592	36939
7	C.Magalur	6084	9966	27172
8	C.Durga	7233	11827	32017
9	Mangalur	15340	34419	116406
10	Dharwad	12687	26474	76904
11	Gulbarga	12380	19550	56004
12	Hassan	8935	15436	41279
13	Kodagu	4414	7982	25314
14	Kolar	12502	37924	75561
15	Mandya	7778	13222	35539
16	Mysore	18341	32826	97513
17	Raichur	7819	15725	38144
18	Shimoga	11928	18605	50716
19	Tumkur	18626	36092	94742
20	Karwar	9121	18004	42972
21	Bagalkot	6063	10493	27312
22	C.nagar	7134	7019	29977
23	D'gere	6869	15557	32804
24	Gadag	6480	8589	23808
25	Haveri	7581	6801	28069
26	Koppal	3874	12011	26274
27	Udupi	6475	27426	41374
	TOTAL	**322667**	**696233**	**1833766**

ವಿಧಾನ ಸಭೆ ಪ್ರಶ್ನೆ ಸಂಖ್ಯೆ : 5397ಕ್ಕೆ ಸಂಬಂಧಿಸಿದಂತೆ ಅನುಬಂಧ

ಕ್ರ.ಸಂ	ಜಿಲ್ಲೆಯ ಹೆಸರು	ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣ ಎ. ಗು.	ಹಂಚಿಕೆಯಾಗದೆ ಉಳಿದಿರುವ ಜಮೀನಿನ ವಿಸ್ತೀರ್ಣ ಎ. ಗು.
1	ಬೆಂಗಳೂರು ನಗರ	1081.07	301.03
2	ಬೆಂಗಳೂರು (ಗ್ರಾ)	506.33	76.01
3	ಬೆಳಗಾಂ	4.18	ಖಾಲಿ ಇಲ್ಲ
4	ಬಳ್ಳಾರಿ	105.29	27.29
5	ಬಿಜಾಪುರ	7.05	ಖಾಲಿ ಇಲ್ಲ
6	ಬಾಗಲಕೋಟೆ	30.00	0.26
7	ಚಾಮರಾಜನಗರ	0.23	ಖಾಲಿ ಇಲ್ಲ
8	ಚಿತ್ರದುರ್ಗ	96.33	ಖಾಲಿ ಇಲ್ಲ
9	ದಕ್ಷಿಣ ಕನ್ನಡ	425.00	423.38
10	ದಾವಣಗೆರೆ	485.09	104.25
11	ಧಾರವಾಡ	18.26	0.12
12	ಗುಲ್ಬರ್ಗಾ	2076.07	1403.06
13	ಹಾಸನ	482.15	482.15
14	ಹಾವೇರಿ	51.00	ಖಾಲಿ ಇಲ್ಲ
15	ಕೊಪ್ಪಳ	125.24	ಖಾಲಿ ಇಲ್ಲ
16	ಕೋಲಾರ	15.33	5.09
17	ಮಂಡ್ಯ	216.06	153.10
18	ಮೈಸೂರು	13.13	ಖಾಲಿ ಇಲ್ಲ
19	ರಾಯಚೂರು	59.28	59.28
20	ಶಿವಮೊಗ್ಗ	26.36	26.36

21	ತುಮಕೂರು	1.07	ಖಾಲಿ ಇಲ್ಲ
22	ಉಡುಪಿ	110.20	110.20
23	ಉತ್ತರ ಕನ್ನಡ	179.39	80.12
	ಒಟ್ಟು	**6119.23**	**3255.30**

4656 (5339) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ) :- ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ವ್ಯಾಪ್ತಿಗೆ ಬರುವ ವಕ್ಫ್ ಮಂಡಳಿಯ ಆಸ್ತಿಯ ವಿವರಗಳೇನು; ಅದನ್ನು ಅಲ್ಪಸಂಖ್ಯಾತ ಸಮುದಾಯದ ಅಭಿವೃದ್ಧಿಗಾಗಿ ಯಾವ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ; (ತಾಲ್ಲೂಕುವಾರು ವಿವರ ನೀಡುವುದು);

ಆ) ವಕ್ಫ್ ಬೋರ್ಡ್ ಮತ್ತು ಅದರ ಅಭಿವೃದ್ಧಿಪರ ಯೋಜನೆಗಳಿಗಾಗಿ ಸರ್ಕಾರ ಕಳೆದ ಎರಡು ವರ್ಷಗಳಲ್ಲಿ ಮಂಜೂರು ಮಾಡಿದ ಹಣದ ಮೊತ್ತ ಎಷ್ಟು;

ಇ) ವಕ್ಫ್ ಮಂಡಳಿ ಅಲ್ಪಸಂಖ್ಯಾತ ಸಮುದಾಯದ ಪುರೋಭಿವೃದ್ಧಿಗಾಗಿ ಹಮ್ಮಿಕೊಂಡು ಜಾರಿಗೊಳಿಸಿದ ಕಾರ್ಯಕ್ರಮಗಳೇನು?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ಬೀದರ್ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ವಕ್ಫ್ ಸಂಸ್ಥೆಗಳ ಸಂಖ್ಯೆ ಈ ಕೆಳಕಂಡಂತಿದೆ :

	ತಾಲ್ಲೂಕು	**ಒಟ್ಟು ವಕ್ಫ್ ಸಂಸ್ಥೆಗಳು**
1.	ಹುಮನಾಬಾದ್	437
2.	ಬಸವಕಲ್ಯಾಣ	586
3.	ಔರಾದ್	370
4.	ಭಾಲ್ಕಿ	297
5.	ಬೀದರ್	768
		2458

ಮೇಲಿನ ಸಂಸ್ಥೆಗಳಿಂದ ಬರುವ ಆದಾಯವನ್ನು ಸಂಸ್ಥೆಗಳ ನಿರ್ವಹಣೆಗಳಿಗೆ ಉಪಯೋಗಿಸಲಾಗುತ್ತಿದ್ದು ಅಲ್ಪ ಸಂಖ್ಯಾತರ ಸಮುದಾಯಕ್ಕೆ ಅಭಿವೃದ್ಧಿಗಾಗಿ ಇದರಿಂದ ಬರುವ ಆದಾಯ ಲಭ್ಯವಾಗುತ್ತಿಲ್ಲ.